ಸ್ವಚ್ಛಗೊಳಿಸಿಕೊಳ್ಳುತ್ತೀರಿ?' ಅಂತ ಅಪ್ ಡೇಟ್ ಹಾಕಿದ್ದ. ಇದು ಕೆಲವರಿಗೆ ಕಾಮಿಡಿಯಾಗಿ ಕಂಡರೂ ಸರಸ್ವತಿಗೆ ಒಂದು ನಿಗೂಢವಾದ ಸಂಗತಿಯೇ ಆಗಿತ್ತು. ಸರಸ್ವತಿಗೆ ಒಮ್ಮೆಲೇ ಅವಳ ಮದುವೆಯ ದಿನಗಳ ನೆನಪಾಗಿತ್ತು. ಅತ್ತೆ ರೇಣುಕಮ್ಮನ ರಿಪಿ ರಿಪಿ ಕಣ್ಣೆದುರೇ ಬಂದ ಹಾಗಾಗಿತ್ತು. ಅದಕ್ಕೆ ಸುಮಾರು ಮೂವತ್ತೇಳು ಕಮೆಂಟುಗಳು ನೂರಾರು ಲೈಕ್‌ಗಳೂ ಬಂದಿದ್ದವು. ಕಮೆಂಟುಗಳು ಓದಲು ತಮಾಷೆಯಾಗಿತ್ತು. 'ಎಡಗೈಯಲ್ಲಿ ಸ್ವಚ್ಛಗೊಳಿಸಿಕೊಳ್ಳುವುದು ಸಂಪ್ರದಾಯ.' 'ನಮ್ಮ ನಮ್ಮ ಅನುಕೂಲಕ್ಕೆ ತಕ್ಕಂತೆ ಯಾವ ಕೈಯಲ್ಲಾದರೂ ಸರಿ.' 'ರೊಡ್ಡರು ಬಲಗೈಲ್ಲೇ ಸ್ವಚ್ಛಗೊಳಿಸಿಕೊಳ್ಳುವರು' ಎಂದೆಲ್ಲ ತಮಾಷೆಯಾಗಿರುವ ಕಮೆಂಟುಗಳನ್ನು ಶಂಕರನ ಬಳಿ ಸರಸ್ವತಿ ಓದಿಯೂ ಹೇಳಿದ್ದಳು. 'ಹೌದೇ? ಹೌದೇ?' ಅಂತ ಕೇಳುತ್ತ ಶಂಕರ ಅಷ್ಟೇನೂ ಆಸಕ್ತಿ ತೋರಿಸಿರಲಿಲ್ಲ. 'ನಿನ್ನದೂ ಒಂದು ಫೇಸ್‌ಬುಕ್ ಅಕೌಂಟ್ ಓಪನ್ ಮಾಡಿಕೊಡಲೇ?' ಅಂತ ಕೇಳಿದ್ದಕ್ಕೆ ಶಂಕರ 'ನನಗೆಲ್ಲಿ ಪುರುಸೊತ್ತು? ಬ್ಯಾಂಕಿನ ಕೆಲಸವೇ ಹಾಸಿ ಹೊದೆಯುವಷ್ಟಿದೆ' ಅನ್ನುತ್ತ ನಿರಾಸಕ್ತಿ ತೋರಿದ್ದ.

**ಮದುವೆಗಳಂತಹ ಕಾರ್ಯಕ್ರಮಗಳಿಗೆ ಹೋದಾಗ, ತನ್ನ ಸಂಬಂಧಿಗಳು ಸಿಕ್ಕಾಗಲೆಲ್ಲ 'ನೀನ್ ಫೇಸ್‌ಬುಕ್‌ನಾಗ ಅದೀಯೆನ?' ಅಂತ ಕೇಳಿ ಕೇಳಿ ಅವರಿವರ ತಲೆತಿಂದು, ಫೇಸ್‌ಬುಕ್‌ನಲ್ಲಿ ಇದ್ದಂಥ ಮಹನೀಯರಿಗೆಲ್ಲ ಅವರು ಫೀಡ್ ಮಾಡಿದ ಹೆಸರನ್ನು ಸರಿಯಾಗಿ ತಿಳಿದುಕೊಂಡು, ಮನೆಗೆ ಬಂದವಳೇ ಅವರ ಅಕೌಂಟ್ ಹುಡುಕಿ, ಫ್ರೆಂಡ್ ರಿಕ್ವೆಸ್ಟ್ ಕಳಿಸಿ ಸ್ನೇಹಬಳಗ ಹೆಚ್ಚಿಸಿಕೊಂಡಳು.**

ಶಂಕರ ಅತ್ತ ಬ್ಯಾಂಕಿಗೆ ಹೋದದ್ದೇ ಅಷ್ಟೇ ಬೇಗ ಮನೆಗೆಲಸ ಮುಗಿಸಿದ ಸರಸ್ವತಿ ಇತ್ತ ಫೇಸ್‌ಬುಕ್ ಓಪನ್ ಮಾಡುತ್ತಿದ್ದಳು. ನೂರಾರು ಹೊಸ ಹೊಸ ವಿವರ ನೀಡುವ ಅಪ್ ಡೇಟ್‌ಗಳು ಅವಳಿಗಾಗಿ ಕಾಯುತ್ತಿದ್ದವು. ಕೆಲವರು ಕಂಗ್ಲೀಷಿನಲ್ಲಿ ಬರೆದಿರುತ್ತಿದ್ದರು. 'ಊಟ ಆಯ್ತೇ' ಅಂತ ಕೇಳಿದ್ದು ಒಮ್ಮೆಲೆ ಗ್ರಹಿಸಲು ಬಾರದೇ 'ಊತ ಆಯ್ತೇ' ಎಂದು ಓದಿಕೊಂಡು ನಂತರ ಸರೀ ಓದಿಕೊಳ್ಳುತ್ತಿದ್ದಳು. 'ಇಲ್ಲಿ ತುಂಬಾ ಮಳೆ ಇದೆ' ಎಂದ್ಯಾರೋ ಕೊಟ್ಟಿದ್ದನ್ನು 'ಇಲ್ಲಿ ಟುಂಬಾ ಮಲೆ ಇಡೆ' ಅಂತ ಓದಿಕೊಳ್ಳುವಂತಾಗುತ್ತಿತ್ತು. ತನ್ನ ಕಂಗ್ಲೀಷಿನ ಬರಹವೂ ಬೇರೆಯವರಿಗೆ ಇಂಥದೇ ಹಿಂಸೆ ಕೊಡಬಹುದು ಎಂದು ತಿಳಿದ ಸರಸ್ವತಿ 'ಇಲ್ಲಿ ಕನ್ನಡ ಲಿಪಿಯಲ್ಲಿ ಬರೆಯಲು ಏನು ಮಾಡಬೇಕು?' ಅಂತ ಕೇಳಿ ಒಂದು ಅಪ್ಡೇಟ್ ಹಾಕಿದಳು.

ಮುಂದಿನ ಕೆಲವೇ ನಿಮಿಷಗಳಲ್ಲಿ ಎಂಟ್ಹತ್ತು ಕಮೆಂಟುಗಳು ಬಂದವು. 'ಬರಹ ಸಾಫ್ಟ್ ವೇರ್ ಹಾಕಿಸಿಕೊಳ್ಳಿ ಮ್ಯಾಡಂ.' 'ಯೂನಿಕೋಡ್ ಬಳಸಿ ಮ್ಯಾಡಂ' ಅಂತೆಲ್ಲ ಬರೆದಿದ್ದನ್ನು ಓದಿದರೂ ಸರಸ್ವತಿಗೆ ತಲೆಯಲ್ಲಿ ಹೋಗಿರಲಿಲ್ಲ. ಅಂದೇ ಊಟ ಮಾಡುತ್ತ ಕೂತಿರುವಾಗ ಶಂಕರ 'ಪಿಯೂಸಿ ಆಗಿದ್ದೆಯಂತೆ, ಕನ್ನಡ ಬರೆಯಾಕ್ ಬರಂಗಿಲ್ಲನ?' ಅಂತ ತಮಾಷೆ ಮಾಡಿಬಿಟ್ಟಿದ್ದ.